ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೨೦, ಮೇ, ೨೦೨೬ (ವೈಶಾಖ, ೩೦, ಶಕವರ್ಷ, ೧೯೪೮)	ಸಂಚಿಕೆ ೯೫
Volume - 161	BENGALURU, WEDNESDAY, 20, MAY, 2026 (VAISHAKHA , 30, SHAKAVARSHA, 1948)	Issue 95

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ ಮತ್ತು ಅಕ್ರಮ ನೇಮಕಾತಿಗಳು ಹಾಗೂ ಕಂಪನಿಗೆ ಉಂಟಾಗಿದೆ ಎನ್ನಲಾದ ಆರ್ಥಿಕ ನಷ್ಟದ ಕುರಿತು ತನಿಖೆ ನಡೆಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025, ದಿನಾಂಕ:14.01.2026 ಮತ್ತು ದಿನಾಂಕ:27.01.2026 ಮತ್ತು 31.03.2026ರ ತಿದ್ದುಪಡಿ ಆದೇಶ
2. ಶ್ರೀ ಶೇಖರ್ ಗಾಯಕವಾಡ, ಭಾ.ಆ.ಸೇ (ನಿವೃತ್ತ) ಹಾಗೂ ನಿವೃತ್ತ ಸಕ್ಕರೆ ಆಯುಕ್ತರು, ಮಹಾರಾಷ್ಟ್ರ, ಇವರ ದಿನಾಂಕ:27.03.2026ರ ಪತ್ರ.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶಗಳಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ 2021-22ನೇ ಸಾಲಿನಿಂದ ಈವರೆಗೆ ನಡೆದಿವೆ ಎನ್ನಲಾದ ಅವ್ಯವಹಾರಗಳು ಮತ್ತು ನಿಯಮಬಾಹಿರ ಚಟುವಟಿಕೆಗಳು, ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ದೂರುಗಳ ಕುರಿತು ಪರಿಶೀಲಿಸಿ ವರದಿ ನೀಡಲು ತನಿಖಾ ಸಮಿತಿಯನ್ನು ರಚಿಸಿ, ಸಮಿತಿಯ ಅವಧಿಯನ್ನು ದಿನಾಂಕ:31.03.2026ರವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಶ್ರೀ ಶೇಖರ್ ಗಾಯಕ್‌ವಾಡ್ ಅಧ್ಯಕ್ಷರು, ತನಿಖಾ ಸಮಿತಿ ಇವರು ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ ಮತ್ತು ಅಕ್ರಮ ನೇಮಕಾತಿಗಳು ಹಾಗೂ ಕಂಪನಿಗೆ ಉಂಟಾಗಿದೆ ಎನ್ನಲಾದ ಆರ್ಥಿಕ ನಷ್ಟದ ಕುರಿತು ವಿಚಾರಣೆಯನ್ನು ನಡೆಸಿದ್ದು, ವಿಚಾರಣೆಯು ಮುಕ್ತಾಯದ ಹಂತದಲ್ಲಿದ್ದು, ವಿಚಾರಣಾ ವರದಿಯನ್ನು ಸಲ್ಲಿಸಲು ಕಾಲಾವಕಾಶದ ಅಗತ್ಯವಿರುವುದರಿಂದ, ವಿಚಾರಣಾ ಸಮಿತಿಯ ಅವಧಿಯನ್ನು ದಿನಾಂಕ:30.04.2026ರವರೆಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಎಸ್‌ಜಿಎಫ್ 2025,
ಬೆಂಗಳೂರು, ದಿನಾಂಕ:22ನೇ ಏಪ್ರಿಲ್ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ 2021-22ನೇ ಸಾಲಿನಿಂದ ಈವರೆಗೆ ನಡೆದಿವೆ ಎನ್ನಲಾದ ಅವ್ಯವಹಾರಗಳು ಮತ್ತು ನಿಯಮಬಾಹಿರ ಚಟುವಟಿಕೆಗಳು, ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ಕುರಿತಾದ ದೂರುಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ಸಮಿತಿಯ ಅವಧಿಯನ್ನು ದಿನಾಂಕ:30.04.2026ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-181

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ನಾಗರಭಾವಿ ಕ್ಲಬ್, ಸಿ.ಎ.ಸಂ.6/7, 10ನೇ ವಿಭಾಗ, ನಾಗರಭಾವಿ 2ನೇ ಹಂತ, ಬೆಂಗಳೂರು-72 ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ)ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಕಛೇರಿಯ ಏಕ ಕಡತ ಸಂಖ್ಯೆ: RCS/SOR/SOR2/15/2026-SOR (2129633).
2. ಸರ್ಕಾರದ ನೋಟೀಸ್ ಸಂಖ್ಯೆ:ಸಿಒ 82 ಸಿಎಸ್‌ಆರ್ 2026, ದಿನಾಂಕ:09.04.2026.
3. ಅಧ್ಯಕ್ಷರು, ನಾಗರಭಾವಿ ಕ್ಲಬ್, ಬೆಂಗಳೂರು ಇವರ ಸಮಜಾಯಿಷಿ ದಿನಾಂಕ:23.04.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1) ರ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಏಕ ಕಡತದಲ್ಲಿ ಶ್ರೀ ಕೆ.ಪುಟ್ಟಸ್ವಾಮಿ ಮತ್ತು ಶ್ರೀ ಹನುಮಂತರಾಯಪ್ಪ ಇವರುಗಳು ನಾಗರಭಾವಿ ಕ್ಲಬ್ ಈ ಸಂಘದ ವಿರುದ್ಧ ಸಲ್ಲಿಸಿರುವ ದೂರು ಅರ್ಜಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಇವರನ್ನು ನೇಮಿಸಿ ಆದೇಶಿಸಿದ್ದು, ಸದರಿ ವಿಚಾರಣೆಯಲ್ಲಿ 30

ವಿಚಾರಣಾಂಶಗಳನ್ನು ನಿಗದಿಪಡಿಸಿದ್ದು, ಸದರಿ ವಿಚಾರಣಾಧಿಕಾರಿಗಳ ವರದಿಯಂತೆ ನಾಗರಬಾವಿ ಕ್ಲಬ್ ಸರ್ವ ಸದಸ್ಯರ ಸಭೆಯಲ್ಲಿ ಯಾವುದೇ ಕಾರ್ಯಸೂಚಿಗಳನ್ನು ಮಂಡಿಸಿ ಅನುಮೋದನೆ ಪಡೆಯಲು ಹಾಲಿ ಕಾರ್ಯಕಾರಿ ಮಂಡಳಿಯು ವಿಫಲರಾಗಿರುವುದಾಗಿ ಹಾಗೂ ಕ್ಲಬ್‌ನಲ್ಲಿನ ಅವ್ಯವಹಾರಗಳಿಗೆ ಕಾರಣಕರ್ತರಾದವರ ಮೇಲೆ ಜವಾಬ್ದಾರಿ ನಿಗದಿಪಡಿಸಲು ಹಾಗೂ ನ್ಯೂನತೆಗಳನ್ನು ಸರಿಪಡಿಸಿಕೊಂಡು ಸೂಕ್ತವಾದ ಕಾರ್ಯಕಾರಿ ಮಂಡಳಿಯನ್ನು ಅಸ್ತಿತ್ವಕ್ಕೆ ತರಲು ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27-ಎ ರಡಿ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ(2) ರನ್ವಯ ನಾಗರಭಾವಿ ಕ್ಲಬ್, ಸಿ.ಎ.ಸಂ.6/7, 10ನೇ ವಿಭಾಗ, ನಾಗರಭಾವಿ 2ನೇ ಹಂತ, ಬೆಂಗಳೂರು-72, ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ ಸಂಘದ ಅಧ್ಯಕ್ಷರು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ವಿಚಾರಣಾಧಿಕಾರಿಗಳು ನಾವುಗಳು ನೀಡಿರುವ ವಿಚಾರಣಾಂಶಗಳಿಗೆ ಉತ್ತರಿಸಿರುವ ವಿವರಣೆಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ ವರದಿಯನ್ನು ನೀಡಿರುವುದಾಗಿ, ಹಿಂದಿನ ಖಜಾಂಚಿ ಆಗಿದ್ದ ಶ್ರೀ ಬಿ.ಎಂ.ರವಿಶಂಕರ್ ರವರಿಗೆ ಕ್ಲಬ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಹಿಂದಿರುಗಿಸಲು ನೋಟಿಸ್ ನೀಡಲಾಗಿದೆ. ದಾಖಲೆಗಳನ್ನು ಹಿಂತಿರುಗಿಸಿರುವುದಿಲ್ಲ. ಖಜಾಂಚಿ ಶ್ರೀ ಆರ್. ಕಿರಣ್ ಕುಮಾರ್ ಮತ್ತು ಕಾರ್ಯದರ್ಶಿ ಆರ್. ಕುಮಾರ್ ರವರುಗಳು ಸ್ವಂತ ಸಹೋದರರಾಗಿದ್ದು ಮತ್ತು ಕ್ಲಬ್‌ನ ಹಿಂದಿನ 1997 ರಿಂದ 2001 ರವರೆಗೆ 4 ವರ್ಷಗಳಿಗೆ ಕಾರ್ಯದರ್ಶಿಯಾಗಿ ಶ್ರೀ ಹನುಮಂತರಾಯಪ್ಪ 2008 ರಿಂದ 2016 ರವರೆಗೆ 8 ವರ್ಷಗಳ ಕಾಲ ಕ್ಲಬ್‌ನ ಅಧ್ಯಕ್ಷರಾಗಿದ್ದ ಶ್ರೀ ಎಸ್ ವೆಂಕಟೇಶ ಬಾಬು ರವರು ಬಿ.ಬಿ.ಎಂ.ಪಿ ಸದಸ್ಯರಾಗಿದ್ದು ಅಂದಿನ ಕ್ಲಬ್‌ನ ಅಧ್ಯಕ್ಷರಾಗಿದ್ದ ಶ್ರೀ ಎಸ್ ವೆಂಕಟೇಶ ಬಾಬು ಮತ್ತು ಅಂದಿನ ಖಜಾಂಜಿಯಾಗಿದ್ದ ಶ್ರೀ ಆರ್.ಕಿರಣ್ ಕುಮಾರ್ ಉಪಾಧ್ಯಕ್ಷರಾಗಿದ್ದ ಶ್ರೀ ಆರ್.ಕುಮಾರ್ ಅವರುಗಳೇ ಕ್ಲಬ್‌ನ ಆಡಳಿತ ನಿರ್ವಹಣೆ ಮಾಡುತ್ತಿದ್ದರು. ಮೇಲ್ಕಂಡ ವಿವರಣೆಗಳಿಂದ ಕ್ಲಬ್‌ನ ಅಧ್ಯಕ್ಷನಾಗಿ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರ ಸಭೆಯ ಮತು ವಿಶೇಷ ಸರ್ವ ಸದಸ್ಯರ ಸಭೆಯ ಸರ್ವಾನುಮತದ ತೀರ್ಮಾನದಂತೆ ಮತ್ತು ಕ್ಲಬ್‌ನ ನಿಯಮಗಳಂತೆ ಅಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದೇನೆಯೇ ಹೊರತು ಯಾವುದೇ ಸ್ವಹಿತಾಸಕ್ತಿ ವಹಿಸದೆ ಕ್ಲಬ್‌ನ ಆಡಳಿತ ಮತ್ತು ಕಟ್ಟಡ ನಿರ್ಮಾಣದಲ್ಲಿ ಕ್ಲಬ್‌ನ ಹಿಂದಿನ ಮತ್ತು ಹಾಲಿ ಕಾರ್ಯಕಾರಿ ಸಮಿತಿಯವರು ಮತ್ತು ಆಡಳಿತ ಸಮಿತಿಯವರು ಸಂಪೂರ್ಣ ಜವಾಬ್ದಾರಿಯಿಂದ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಮೇಲ್ವಿಚಾರಣೆ ಮತ್ತು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವೆನೇ ಹೊರತು ಯಾವುದೇ ವೈಯಕ್ತಿಕ ಜವಾಬ್ದಾರಿ ಹೊಂದಿರಲಿಲ್ಲವೆಂದು, ರಾಜಕೀಯ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಯಾವುದೇ ದೂರುದಾರರ ಆರೋಪಗಳಿಗೆ ಸಂಬಂದಿಸಿದಂತೆ ಯಾವುದೇ ಪೂರಕ ದಾಖಲೆಗಳನ್ನು ಪಡೆಯದೇ ವರದಿ ನೀಡಿರುವುದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುತ್ತದೆ. ಕ್ಲಬ್‌ನ 28 ವರ್ಷಗಳ ಸರ್ವ ಸದಸ್ಯರ ನಡವಳಿಕೆ ವಿವರ ಲೆಕ್ಕಪತ್ರಗಳ ವಿವರಗಳನ್ನು ಸರಿಯಾದ

ಸಮಯದಲ್ಲಿ ಜಿಲ್ಲಾ ನೋಂದಣಾಧಿಕಾರಿಯವರಿಗೆ ಸಲ್ಲಿಸಿರುವುದು ಸದರಿ ಇಲಾಖೆಯಿಂದ ಅಂಗೀಕಾರವಾಗಿದ್ದು ಯಾವುದೇ ರೀತಿಯ ತಕರಾರುಗಳಿಗೆ ನವೀಕರಣಕ್ಕೆ ತಡೆಯಾಗಲಿ ಇರುವುದಿಲ್ಲ. ಕ್ಲಬ್‌ನ ಲೆಕ್ಕ ಪತ್ರಗಳು ಸರಿ ಇದ್ದು ಕ್ಲಬ್‌ನಿಂದ ಹೆಚ್ಚಿಗೆ ಪಾವತಿಸಿದ ಏಳು ವರ್ಷಗಳ ತೆರಿಗೆಯನ್ನು ಹಿಂದಕ್ಕೆ ಪಡೆದಿದ್ದೇವೆ. ಕ್ಲಬ್‌ನಿಂದ ತೆರಿಗೆ ಪಾವತಿಯು ಸರಿ ಇದೆ ಎಂದು ಜಿಎಸ್‌ಟಿ ಇಲಾಖೆಯಿಂದ 3 ವರ್ಷ ಸತತವಾಗಿ ಗೋಲ್ಡ್ ಸರ್ಟಿಫಿಕೇಟ್‌ನ್ನು ಪಡೆದಿರುತ್ತೇವೆ. ದಯಮಾಡಿ ಕ್ಲಬ್‌ನ ಅಧ್ಯಕ್ಷರ ವಿರುದ್ಧ ಯಾವುದೇ ಸೂಕ್ತ ಸಾಕ್ಷಿಯ ದಾಖಲೆಗಳಿಲ್ಲದೆ ಮಾಡಿರುವ ಆರೋಪಗಳನ್ನು ರದ್ದುಮಾಡಿ ಕ್ಲಬ್‌ನ ಆಡಳಿತ ಸುಗಮವಾಗಿ ನಡೆಸಲು ಅನುಮತಿ ನೀಡಲು ಹಾಗೂ ಬಾಕಿ ಉಳಿದಿರುವ ನೂತನ ಕಟ್ಟಡದ ಕೆಲಸಗಳನ್ನು ಪೂರೈಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಮತ್ತು ಅಧ್ಯಕ್ಷರು, ನಾಗರಭಾವಿ ಕ್ಲಬ್, ಬೆಂಗಳೂರು ಇವರು ಸಲ್ಲಿಸಿರುವ ಸಮಜಾಯಿಷಿ ಮತ್ತು ಅದರೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ನಾಗರಭಾವಿ ಕ್ಲಬ್, ನಾಗರಭಾವಿ, ಬೆಂಗಳೂರು ಈ ಕ್ಲಬ್‌ನ ವಿರುದ್ಧ ಶ್ರೀ ಕೆ.ಪುಟ್ಟಸ್ವಾಮಿಗೌಡ ಹಾಗೂ ಶ್ರೀ ಹನುಮಂತರಾಯಪ್ಪ ಇವರುಗಳು ದಿನಾಂಕ:17.11.2025 ಹಾಗೂ 01.10.2026ರಂದು ದೂರು ಸಲ್ಲಿಸಿದ್ದು, ಸದರಿ ದೂರನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-25ರಡಿ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿಯನ್ನಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ನೇಮಿಸಲಾಗಿದ್ದು, ಒಟ್ಟು 30 ಅಂಶಗಳಿಗೆ ಸಂಬಂಧಪಟ್ಟಂತೆ ವಿಚಾರಣೆಯನ್ನು ಜರುಗಿಸಲಾಗಿರುತ್ತದೆ. ವಿಚಾರಣಾಧಿಕಾರಿಯು ದಿನಾಂಕ:20.01.2026ರಂದು ವಿಚಾರಣೆ ನಿಗದಿಪಡಿಸಿ ನೋಟಿಸ್ ನೀಡಿದ್ದು, ದಿನಾಂಕ:01.02.2026ರಂದು ಕ್ಲಬ್‌ನ ವಾರ್ಷಿಕ ಮಹಾಸಭೆಯನ್ನು ನಿಗಧಿಪಡಿಸಿರುವ ಕಾರಣ ಸಭೆಯ ಪೂರ್ವ ಸಿದ್ಧತೆಗೆ ಸಿಬ್ಬಂದಿಯವರನ್ನು ತೊಡಗಿಸಿಕೊಂಡಿರುವುದರಿಂದ ಆರೋಪಗಳಿಗೆ ದಾಖಲಾತಿಯನ್ನು ಒದಗಿಸಲು 45 ದಿನಗಳ ಕಾಲಾವಕಾಶವನ್ನು ನೀಡಬೇಕೆಂದು ಕ್ಲಬ್‌ನ ಕಾರ್ಯದರ್ಶಿಯವರಾದ ಆರ್.ಕುಮಾರ್‌ರವರು ಕೋರಿರುತ್ತಾರೆ. ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪುನಃ ವಿಚಾರಣೆಯನ್ನು ದಿನಾಂಕ:04.02.2026ರಂದು ಸಂಸ್ಥೆಯ ಅಧ್ಯಕ್ಷರು ಆರೋಪಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳು 2017 ರಿಂದ 2022ರ ಮತ್ತು 2022-25ರವರೆಗೆ ಖಜಾಂಚಿಯಾಗಿ ಕಾರ್ಯನಿರ್ವಹಿಸಿರುವ ಶ್ರೀ ಬಿ.ವಿ.ರವಿಶಂಕರ್‌ರವರ ಬಳಿ ಇದ್ದು, ಈವರೆಗೂ ಹಿಂದಿರುಗಿಸಿರುವುದಿಲ್ಲ ಹಾಗೂ ಕ್ಲಬ್‌ನ ಕಾರ್ಯದರ್ಶಿಯಾದ ಶ್ರೀ ಆರ್.ಕುಮಾರ್‌ರವರು ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ಹಾಗೂ ಕ್ಲಬ್‌ನ ಅಧ್ಯಕ್ಷರ ಪುತ್ರನ ವಿವಾಹವಿರುವುದರಿಂದ ದಾಖಲಾತಿಗಳನ್ನು ಒದಗಿಸಲು 90 ದಿನಗಳ ಕಾಲಾವಕಾಶವನ್ನು ಕೋರಿರುತ್ತಾರೆ. 90 ದಿನಗಳ ಕಾಲಾವಕಾಶ ಕೇಳಿರುವುದನ್ನು ದೂರುದಾರರಾದ ಶ್ರೀ ಕೆ.ಪುಟ್ಟಸ್ವಾಮಿಗೌಡರವರು ಆಕ್ಷೇಪಿಸುತ್ತಾ, ಈಗಾಗಲೇ 2 ತಿಂಗಳು ಹಾಗೂ 2 ಬಾರಿ ಅವಕಾಶ ನೀಡಿರುವುದರಿಂದ ಕಾಲಾವಕಾಶ ನೀಡಬಾರದಾಗಿ ಕೋರಿದ್ದು, ವಿಚಾರಣೆಯನ್ನು ದಿನಾಂಕ:18.02.2026ರಂದು ನಿಗದಿಪಡಿಸಲಾಗಿದ್ದು, ಆರೋಪಗಳಿಗೆ ಸಂಬಂದಿಸಿದಂತೆ ದೂರುದಾರರು ಹೇಳಿಕೆ ಮತ್ತು ದಾಖಲಾತಿಗಳನ್ನು ಸಲ್ಲಿಸಲು ಕಾಲಾವಕಾಶ ನೀಡಿ ದಿನಾಂಕ:04.03.2026ರಂದು ನಡೆದ ವಿಚಾರಣೆಗೆ ಕ್ಲಬ್‌ನ ಅಧ್ಯಕ್ಷರು ಗೈರು ಹಾಜರಿದ್ದು, ಕಾರ್ಯದರ್ಶಿ, ಖಜಾಂಚಿ ಹಾಗೂ ದೂರುದಾರರು ಹಾಜರಿದ್ದು, ಕ್ಲಬ್‌ನ ಕಾರ್ಯದರ್ಶಿಯವರು

ಮೌಖಿಕ ಹೇಳಿಕೆಯನ್ನು ನೀಡಿ 1997ರಿಂದ ಈ ವರೆವಿಗೂ ಸಂಸ್ಥೆಯ ಎಲ್ಲಾ ವ್ಯವಹಾರವು ಅಧ್ಯಕ್ಷರ ಸುಪರ್ದಿಯಲ್ಲಿಯೇ ನಡೆಯುತ್ತಿರುವುದರಿಂದ ಆರೋಪಗಳಿಗೆ ಸಂಬಂಧಿಸಿದ ದಾಖಲಾತಿ/ಮಾಹಿತಿಗಳನ್ನು ಅಧ್ಯಕ್ಷರು ಸಲ್ಲಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಮುಂದುವರೆದು, ಸಂಸ್ಥೆಯ ಖಜಾಂಚಿಯವರಾದ ಕಿರಣ್ ಕುಮಾರ್ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ನಾನು ಮತ್ತು ಅಧ್ಯಕ್ಷರು ಚೆಕ್‌ಗಳ ವ್ಯವಹಾರವನ್ನು 2025ನೇ ಜನವರಿ ಮಾಹೆಯಿಂದ ಜಂಟಿಯಾಗಿ ಸಹಿ ಮಾಡಲಾಗಿರುತ್ತದೆ, ಆದ್ದರಿಂದ ಚೆಕ್‌ಗಳಿಗೆ ನಾನು ಸಹಿ ಮಾಡಿರುವುದನ್ನು ಹೊರತುಪಡಿಸಿ ಪ್ರಕರಣದ ಆರೋಪಗಳು ನನಗೆ ಸಂಬಂಧಿಸಿರುವುದಿಲ್ಲ ಎಲ್ಲಾ ವ್ಯವಹಾರಗಳಿಗೆ ಅಧ್ಯಕ್ಷರು ಜವಾಬ್ದಾರರೆಂದು ಸಂಸ್ಥೆಯ ಕಾರ್ಯದರ್ಶಿ ಮತ್ತು ಖಜಾಂಚಿ ತಿಳಿಸಿರುತ್ತಾರೆ. ಕ್ಲಬ್ ಸದಸ್ಯತ್ವ ಶುಲ್ಕ ರೂ.3,00,000/-(ನಾಗರಭಾವಿ ನಿವಾಸಿಗಳಿಗೆ), ಅನ್ಯರಿಗೆ ರೂ.5,00,000/-ವೆಂದು ದಿನಾಂಕ:13-03-2020ರಂದು ದಿನಾಂಕ:01-10-2023 ರಂದು ರೂ.10,00,000/- ಎಂದು ನಿಗದಿ ಮಾಡಿ ಬೈಲಾ ತಿದ್ದುಪಡಿಗಳಾಗಿದ್ದವು. ಆದರೆ, ಈ ದಿನಾಂಕಗಳ ನಂತರ ನಾನಾ ರೀತಿಯ ಮೊತ್ತಗಳನ್ನು ಚೆಕ್ ಮತ್ತು ನಗದು ರೂಪಗಳಲ್ಲಿ ಪಡೆದು, ನಗದಾಗಿ ಪಡೆದ ಹಣಕ್ಕೆ ರಸೀದಿಯನ್ನು ನೀಡದೆ ಸದಸ್ಯತ್ವವನ್ನು ನೀಡಲಾಗಿದೆ. ಈ ಅಕ್ರಮಕ್ಕೆ ಪುರಾವೆಯಾಗಿ ಕ್ಲಬ್‌ನ 42 ಗೌರವಾನ್ವಿತ ಸದಸ್ಯರು ಪ್ರಮಾಣ ಪತ್ರಗಳನ್ನು (ಅಫಿಡೆವಿಟ್) ಮೂಲಕ ಸಲ್ಲಿಸಿರುವುದಾಗಿ ವಿಚಾರಣಾಧಿಕಾರಿಯವರು ವರದಿಯಲ್ಲಿ ತಿಳಿಸಿರುತ್ತಾರೆ. ದಿನಾಂಕ:04.03.2026ರಂದು ನಡೆದ ವಿಚಾರಣೆಯಲ್ಲಿ ಕಾರ್ಯದರ್ಶಿಯಾದ ಶ್ರೀ ಆರ್.ಕುಮಾರ್ ಮತ್ತು ಖಜಾಂಚಿಯಾದ ಶ್ರೀ ಆರ್.ಕಿರಣ್‌ಕುಮಾರ್‌ರವರು ನೀಡಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳು ಈ ಕೆಳಕಂಡಂತಿವೆ:-

1. ಸಂಘದ ಪ್ರಾರಂಭದಿಂದ ಅಂದರೆ 1997 ಇಸವಿಯಿಂದ ಈ ತಹಲ್‌ವರೆವಿಗೂ ದಾಖಲಾತಿಗಳ (CUSTODIAN) ಸುಪರ್ದಿ ಅಧ್ಯಕ್ಷರಾಗಿರುತ್ತಾರೆ ಹಾಗೂ ಎಲ್ಲಾ ಜವಾಬ್ದಾರಿಯನ್ನು ಹೊಂದಿರುತ್ತಾರೆ.
2. ಕ್ಲಬ್‌ನ ಎಲ್ಲಾ ಬ್ಯಾಂಕ್‌ನ ವ್ಯವಹಾರಗಳನ್ನು ಅವರೇ ನಿರ್ವಹಿಸಿದ್ದು 2025ನೇ ಇಸವಿಯಿಂದ ಕೆಲವೊಮ್ಮೆ ಚೆಕ್‌ಗಳಿಗೆ ಸಹಿಯನ್ನು ಮಾಡಿಸಿಕೊಂಡು ವ್ಯವಹರಿಸಿರುತ್ತಾರೆ.
3. ಕ್ಲಬ್‌ನ ಕಟ್ಟಡಕ್ಕೆ ಸಂಬಂಧಿಸಿದ ಎಲ್ಲಾ ಟೆಂಡರ್ ದಾಖಲಾತಿಗಳನ್ನು ಅವರೇ ನಿರ್ವಹಿಸಿದ್ದು, ಕಾಮಗಾರಿಯನ್ನು ಸಹ ಅವರೇ ನಿರ್ವಹಿಸಿರುತ್ತಾರೆ.
4. ದೂರುದಾರರಾದ ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀ ಪುಟ್ಟಸ್ವಾಮಿಗೌಡ ಹಾಗೂ ಇತರೆ ಸದಸ್ಯರು ಮಾಡಿರುವ ಆರೋಪಗಳ ಬಗ್ಗೆ ನಮಗೆ ಮಾಹಿತಿ ಇರುತ್ತದೆ. ಆದರೆ ಅವುಗಳಿಗೆ ದಾಖಲಾತಿ ಮುಖೇನ ಸಮಜಾಯಿಷಿ ನೀಡಲು ಎಲ್ಲಾ ದಾಖಲಾತಿಗಳನ್ನು ಅಧ್ಯಕ್ಷರೇ ಇಟ್ಟುಕೊಂಡಿರುವುದರಿಂದ ನಮಗೆ ದಾಖಲಾತಿಗಳನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲ.

ಆರೋಪಿತ ಅಂಶಗಳಿಗೆ ದಾಖಲಾತಿಗಳನ್ನು ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹ ತಮಗೆ ನೀಡಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಲು ವಿಫಲರಾಗಿದ್ದು ಅಧ್ಯಕ್ಷರು ಆರೋಪಿತ ಅಂಶಗಳಿಗೆ ಸೂಕ್ತ ಹೇಳಿಕೆ ಹಾಗೂ ದಾಖಲಾತಿಗಳನ್ನು ಒದಗಿಸಲು ವಿಫಲರಾಗಿರುವುದರಿಂದ, ಸದರಿಯವರ ಈ ನಡೆಯು ಉದ್ದೇಶಪೂರ್ವಕವೆಂದು ಮೇಲ್ನೋಟಕ್ಕೆ ಕಂಡು ಬಂದಿದ್ದು ಆರೋಪಗಳು ಗುರುತರವಾಗಿದ್ದು, ಕ್ಲಬ್‌ನಲ್ಲಿನ ಆರ್ಥಿಕ ವ್ಯವಹಾರಕ್ಕೆ ಹಾಗೂ ಸದಸ್ಯತ್ವದ ಹಕ್ಕುಗಳಿಗೆ ಸಂಬಂಧಿಸಿರುವುದು ಕಂಡು ಬಂದಿದ್ದು, ನಾಗರಭಾವಿ ಕ್ಲಬ್ ಸದಸ್ಯರ

ಸಂಸ್ಥೆಯಾಗಿದ್ದು, ಸದಸ್ಯರ ಹಿತಾಸಕ್ತಿ ಪ್ರಾಮುಖ್ಯವಾದುದ್ದೆಂದು ಅಭಿಪ್ರಾಯಪಟ್ಟು ವರದಿ ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ಸಹಜ ನ್ಯಾಯ ತತ್ವದಡಿ ದಾಖಲಾತಿಗಳನ್ನು/ ಹೇಳಿಕೆ ನೀಡಲು ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ಸಹ ಅಧ್ಯಕ್ಷರು/ ಆಡಳಿತ ಮಂಡಳಿ ಗೊಂದಲಕರ ಹೇಳಿಕೆಗಳನ್ನು ಹಾಗೂ ಪತ್ರಗಳನ್ನು ನೀಡಿರುವುದು ಕಂಡು ಬಂದಿರುತ್ತದೆ. 2024-25ನೇ ವಾರ್ಷಿಕ ಮಹಾಸಭೆಯನ್ನು ಕಾನೂನುರೀತ್ಯ ನಡೆಸದೇ ಇರುವುದು ಹಾಗೂ 2025-26ನೇ ಸಾಲಿನ ಆಯವ್ಯಯ ಅನುಮೋದನೆ ಆಗದೇ ಇರುವುದು ಅಲ್ಲದೇ ಕ್ಲಬ್‌ನ ವಿರುದ್ಧ ಮಾಡಿರುವ 30 ಆರೋಪಗಳಲ್ಲಿ ಹಣ ದುರುಪಯೋಗ, ಅಧಿಕಾರ ದುರುಪಯೋಗ, ಸದಸ್ಯತ್ವ ನೀಡಿಕೆಯಲ್ಲಿನ ಗೊಂದಲ ಹಾಗೂ ಅವ್ಯವಹಾರ, ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ, ಬೈಲಾ ಉಲ್ಲಂಘನೆ, ಸದಸ್ಯತ್ವದ ಪಟ್ಟಿಯಲ್ಲಿನ ಗೊಂದಲ, ನೂತನ ಕಟ್ಟಡಕ್ಕೆ ಸಂಬಂಧಿಸಿದ ಅವ್ಯವಹಾರ, ಕ್ಲಬ್ಬಿಗೆ ಉಂಟಾಗಿರುವ ಆರ್ಥಿಕ ನಷ್ಟ ಇತ್ಯಾದಿಗಳಿಗೆ ಸಂಬಂಧಿಸಿದ್ದು, ಆರೋಪಗಳಿಗೆ ದಾಖಲಾತಿ ಮುಖೇನ ಸಮಜಾಯಿಷಿ ನೀಡಿ ಆರೋಪಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಪ್ರಯತ್ನವನ್ನು ಮಾಡದೇ, ನೀಡಿರುವ ಅವಕಾಶವನ್ನು ಬಳಸಿಕೊಳ್ಳದೇ ಇರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ ಆಡಳಿತಾಧಿಕಾರಿಯನ್ನಾಗಿ ಶ್ರೀ ವೆಂಕಟೇಶ್ ಎನ್,.ಸಹಕಾರ ಸಂಘಗಳ ಜಂಟಿ ನಿಬಂಧಕರು (ಐ.ಸಿ.ಡಿ.ಪಿ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರನ್ನು ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 82 ಸಿಎಸ್‌ಆರ್ 2026 (ಭಾ-1)

ಬೆಂಗಳೂರು, ದಿನಾಂಕ: 14ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ 27-ಎ ರನ್ವಯ ನಾಗರಭಾವಿ ಕ್ಲಬ್, ಸಿ.ಎ.ಸಂ.6/7, 10ನೇ ವಿಭಾಗ, ನಾಗರಭಾವಿ 2ನೇ ಹಂತ, ಬೆಂಗಳೂರು-72 ಈ ಸಂಘಕ್ಕೆ ಶ್ರೀ ವೆಂಕಟೇಶ್ ಎನ್, ಸಹಕಾರ ಸಂಘಗಳ ಜಂಟಿ ನಿಬಂಧಕರು(ಐ.ಸಿ.ಡಿ.ಪಿ), ಸಹಕಾರ ಸಂಘಗಳ ನಿಬಂಧಕರ ಕಚೇರಿ, ಬೆಂಗಳೂರು ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-182

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಪದ್ಮಾವತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಷವಾಡಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ)ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಎಲ್/ಎಸ್‌ಓಆರ್/ವಿಚಾರಣೆ/06/2024-25/4435, ದಿನಾಂಕ:13.03.2026.
2. ಸರ್ಕಾರದ ನೋಟೀಸ್ ಸಂಖ್ಯೆ:ಸಿಒ 96 ಸಿಎಸ್‌ಆರ್ 2026, ದಿನಾಂಕ:23.04.2026.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1) ರ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಪತ್ರದಲ್ಲಿ ಶ್ರೀ ಪದ್ಮಾವತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಷವಾಡಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಸಂಘದ ಸನ್ 2018 ರಿಂದ ಇಲ್ಲಿಯವರೆಗೆ ಸಂಘದ ಆಡಳಿತ ಮಂಡಳಿಯ ಕಾರ್ಯಚಟುವಟಿಕೆಗಳು, ಆಡಳಿತ ಮಂಡಳಿ ಸದಸ್ಯರ ಆಯ್ಕೆ, ವ್ಯವಹಾರ ಹಾಗೂ ವಾರ್ಷಿಕ ಸಭೆಗಳನ್ನು ನಿಯಮಾನುಸಾರ ಜರುಗಿಸಲಾಗಿದೆಯೇ? ಎಂಬ ಬಗ್ಗೆ 5 ವಿಚಾರಣಾಂಶಗಳ ಕುರಿತು ವಿಚಾರಣೆ ಜರುಗಿಸಲು ಶ್ರೀ ಆರ್.ವಿ.ಕುಲಕರ್ಣಿ, ನಿವೃತ್ತ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇವರನ್ನು ವಿಚಾರಣಾಧಿಕಾರಿಗಳೆಂದು ನೇಮಿಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯ ಪೀಠ ಧಾರವಾಡದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ:101477/2025 ರಲ್ಲಿ ದಿನಾಂಕ:24-02-2025 ರಂದು ಮಧ್ಯಂತರ ಆದೇಶವಾಗಿದ್ದು, ಸದರಿ ಸಂಸ್ಥೆಯ ಕಲಂ 25 ರ ವಿಚಾರಣೆಗೆ ಗೌರವಾನ್ವಿತ ಉಚ್ಚನ್ಯಾಯಾಲಯದ ಮುಂದಿನ ವಿಚಾರಣೆ ದಿನಾಂಕದವರೆಗೆ ತಡೆಯಾಜ್ಞೆ ನೀಡಿದ್ದು ದಿನಾಂಕ:02-12-2025 ರಂದು ಅಂತಿಮ ಆದೇಶ ನೀಡಿ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣಾಧಿಕಾರಿಗಳು ವಿಚಾರಣೆ ವರದಿಯಲ್ಲಿ ಸಂಘಕ್ಕೆ ಲಿಖಿತ ಹೇಳಿಕೆ ಹಾಗೂ ದಾಖಲೆಗಳನ್ನು ಹಾಜರುಪಡಿಸಲು ನೋಟಿಸು ಹೊರಡಿಸಿದ್ದು, ಆದರೆ ಸದರಿ ನೋಟಿಸು ಸ್ವೀಕರಿಸಲು ನಿರಾಕರಣೆ ಮಾಡಿರುವುದಾಗಿ ಅಂಚೆ ಇಲಾಖೆಯಿಂದ ದೃಢೀಕರಿಸಿ ವಾಪಸ್ಸು ಬಂದಿರುತ್ತದೆ. ಸಂಘವು ಉದ್ದೇಶ ಪೂರ್ವಕವಾಗಿ ಸದರಿ ನೋಟಿಸು ಸ್ವೀಕರಿಸಲು ನಿರಾಕರಿಸಿರುವುದು ಕಂಡುಬರುತ್ತದೆ. ಸಂಘಕ್ಕೆ ಹೇಳಿಕೆಯನ್ನು ಸಲ್ಲಿಸಲು ಕೊನೆಯ ಮತ್ತು ಅಂತಿಮ ಅವಕಾಶವನ್ನು ನೀಡಿ ಪುನಃ ಕೊನೆಯ ನೋಟಿಸನ್ನು ಸಂಘಕ್ಕೆ ಸ್ಪೀಡ್ ಪೋಸ್ಟ್ ಮುಖಾಂತರ ದಿನಾಂಕ:20/01/2026 ರಂದು ನೀಡಲಾಗಿರುತ್ತದೆ. ಆದರೂ ಸಹಿತ ಸಂಘವು ಸದರಿ ನೋಟಿಸನ್ನು ಸ್ವೀಕರಿಸಲು ನಿರಾಕರಣೆ ಮಾಡಿರುವುದುದಾಗಿ ಅಂಚೆ ಇಲಾಖೆಯಿಂದ ದೃಢೀಕರಿಸಿ ವಾಪಸ್ ಬಂದಿರುತ್ತದೆ. ಸಂಘವು ವಿಚಾರಣೆಗೆ ಸಹಕಾರ ನೀಡುತ್ತಿಲ್ಲವಾದ್ದರಿಂದ ಹಾಗೂ ಸಂಘದಿಂದ ಮೂಲ ದಾಖಲೆಗಳನ್ನು ವಿಚಾರಣೆಗೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ ಸಂಘದ ಹೇಳಿಕೆ ಏನೂ ಇಲ್ಲವೆಂದು ಪರಿಗಣಿಸಿ, ಇಲಾಖೆಯಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರಗಳ ಮೇಲಿಂದ ಹಾಗೂ ಶ್ರೀ ಕಾಡಪ್ಪಾ ರಾಮಪ್ಪಾ ತೇಲಿ ಒಳಗೊಂಡ 6 ಜನ ಸದಸ್ಯರು ಪೂರೈಸಿದ ದಾಖಲೆಗಳನ್ನು ಆಧರಿಸಿ ವಿಚಾರಣಾ

ವರದಿಯನ್ನು ನೀಡಲಾಗಿದೆ ಎಂದು ವಿಚಾರಣಾ ವರದಿ ಸಲ್ಲಿಸಿದ್ದಾರೆ. ಸದರಿ ವಿಚಾರಣಾ ವರದಿಯಲ್ಲಿ ಕಂಡುಬಂದ ಫಲಿತಾಂಶಗಳನ್ನು (Findings) ಆಧರಿಸಿ, ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27(ಎ) ರಡಿ ಆಡಳಿತಾಧಿಕಾರಿ ನೇಮಿಸಲು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪಸ್ತಾವನೆ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ(2) ರನ್ವಯ ಶ್ರೀ ಪದ್ಮಾವತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಷವಾಡಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ನೋಟೀಸ್ ನೀಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಿ ಸ್ಪೀಡ್ ಪೋಸ್ಟ್ ಮೂಲಕ ನೋಟಿಸ್ ಹೊರಡಿಸಿದ್ದು, ಸಂಘದ ಆಡಳಿತ ಮಂಡಳಿಯು ಸ್ವೀಕರಿಸಲು ನಿರಾಕರಿಸಿರುವ ಹಿನ್ನೆಲೆಯಲ್ಲಿ Refused Return to Sender ಎಂದು ಷರಾ ನಮೂದಿಸಿ ಅಂಚೆ ಇಲಾಖೆಯಿಂದ ಹಿಂದಿರುಗಿಸಲಾಗಿರುತ್ತದೆ.

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಪದ್ಮಾವತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಷವಾಡಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಸಂಘದಲ್ಲಿನ ನ್ಯೂನತೆಗಳನ್ನು ನಿಯಮಾನುಸಾರ ಸರಿಪಡಿಸಿ ಸಂಘಕ್ಕೆ ಚುನಾವಣೆ ನಡೆಸಲು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ ಆಡಳಿತಾಧಿಕಾರಿಯನ್ನಾಗಿ ತಹಶೀಲ್ದಾರ್ ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 96 ಸಿಎಸ್‌ಆರ್ 2026

ಬೆಂಗಳೂರು, ದಿನಾಂಕ: 14ನೇ ಮೇ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಶ್ರೀ ಪದ್ಮಾವತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಹಿಷವಾಡಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಸಂಘಕ್ಕೆ ತಹಶೀಲ್ದಾರ್ ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-183

ಕರ್ನಾಟಕಸರ್ಕಾರದನಡವಳಿಗಳು

ವಿಷಯ: ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಗೋಟೆಗಳಿ ಮತ್ತು ಇತರೆ 09 ಗ್ರಾಮಗಳಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಪೀಠಿಕೆ:

ಮೇಲೆ ಓದಲಾದ ಏಕ ಕಡತದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಗೋಟೆಗಳಿ ಮತ್ತು ಇತರೆ 09 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯನ್ನು 2026-27ನೇ ಸಾಲಿನ ಲೆಕ್ಕಶೀರ್ಷಿಕೆ 2215 ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದ ರೂ.570.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲು ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕನೀತಿಯನ್ವಯ, ನಿಯಮಾನುಸಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರಕನ್ನಡ (ಕಾರವಾರ) ಹಾಗೂ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 2215 O&M ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದಈಆದೇಶ:-

ಸರ್ಕಾರದ ಆದೇಶಸಂ: ಗ್ರಾಅಪ 130 ಆರ್‌ಐ 2026, ಬೆಂಗಳೂರು, ದಿನಾಂಕ:15.05.2026

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಗೋಟೆಗಳಿ ಮತ್ತು ಇತರೆ 09 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯ ಅಂದಾಜು ಮೊತ್ತ **ರೂ.570.00ಲಕ್ಷ (ಐದುನೂರ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ)**ಗಳಿಗೆ ಲೆಕ್ಕಶೀರ್ಷಿಕೆ 2215 O&M ಕಾರ್ಯಕ್ರಮದ ಅಡಿಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ನಿರ್ವಹಣೆಯ ಗುತ್ತಿಗೆಯನ್ನು ವಹಿಸಲಾಗುವ ಸಂಸ್ಥೆಯೇ ಐದು(5) ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ನಿರ್ವಹಿಸತಕ್ಕದ್ದು.
2. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.
3. ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆವಿಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯವಿವರಗಳನ್ನು IMIS ನಲ್ಲಿ ದಾಖಲಿಸತಕ್ಕದ್ದು.

4. ಸದರಿ ಯೋಜನೆಯ O&M ಕಾಮಗಾರಿಯನ್ನು2026-27ನೇ ಸಾಲಿನ ಲೆಕ್ಕಶೀರ್ಷಿಕೆ 2215-MVS (O&M) ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಮೋದನೆ ಪಡೆಯತಕ್ಕದ್ದು.
5. ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್‌ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್‌ರಾವಿನನ್ವಯ ಸಂಗ್ರಹಿಸುವುದು.
6. ಸದರಿಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2026-27ನೇ ಸಾಲಿನಿಂದ ಮುಂದಿನ ಐದು(5) ವರ್ಷದವರೆಗೆ ಪರಿಗಣಿಸತಕ್ಕದ್ದು.
7. ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದು ಹಾಗೂ ಅದೇ ಅವಧಿಗೆ ಟೆಂಡರ್ ಆಹ್ವಾನಿಸಿ, KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.
8. ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ:2215-O&M ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ

(**ಚೇತನಎಂ**.)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು-ಎ ಮತ್ತು ಸ್ವೀಮರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

PR-184

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕು ಕೇತುಪುರ ಮತ್ತು ಇತರೆ 44 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಪೀಠಿಕೆ:

ಮೇಲೆ ಓದಲಾದ ಏಕಕಡತದಲ್ಲಿ ಮೈಸೂರು ಜಿಲ್ಲೆಯ, ಟಿ.ನರಸೀಪುರ ತಾಲ್ಲೂಕು, ಕೇತುಪುರ ಮತ್ತು ಇತರೆ 44 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯನ್ನು 2025-26ನೇ ಸಾಲಿನ ಲೆಕ್ಕಶೀರ್ಷಿಕೆ 2215-ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದ ರೂ.852.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲು ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕನೀತಿಯನ್ವಯ, ನಿಯಮಾನುಸಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ಹಾಗೂ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು

ಅನುವಾಗುವಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 2215-O&M ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಗ್ರಾಅಪ 131 ಆರ್‌ಐ 2026

ಬೆಂಗಳೂರು, ದಿನಾಂಕ:14.05.2026

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಮೈಸೂರು ಜಿಲ್ಲೆಯ, ಟಿ.ನರಸೀಪುರ ತಾಲ್ಲೂಕು, ಕೇತುಪುರ ಮತ್ತು ಇತರೆ 44 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯ ಅಂದಾಜು ಮೊತ್ತ **ರೂ.852.00ಲಕ್ಷ (ಎಂಟುನೂರ ಐವ್ತೆರಡು ಲಕ್ಷ ರೂಪಾಯಿಗಳು ಮಾತ್ರ)**ಗಳಿಗೆ ಲೆಕ್ಕಶೀರ್ಷಿಕೆ 2215-O&M ಕಾರ್ಯಕ್ರಮದ ಅಡಿಯಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ನಿರ್ವಹಣೆಯ ಗುತ್ತಿಗೆಯನ್ನು ವಹಿಸಲಾಗುವ ಸಂಸ್ಥೆಯೇ ಐದು (5) ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ನಿರ್ವಹಿಸತಕ್ಕದ್ದು.
2. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.
3. ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆವಿಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು IMIS ನಲ್ಲಿ ದಾಖಲಿಸತಕ್ಕದ್ದು.
4. ಸದರಿ ಯೋಜನೆಯ O&M ಕಾಮಗಾರಿಯನ್ನು 2025-26ನೇ ಸಾಲಿನ ಲೆಕ್ಕಶೀರ್ಷಿಕೆ 2215-MVS (O&M) ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಮೋದನೆ ಪಡೆಯತಕ್ಕದ್ದು.
5. ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್‌ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್‌ರಾವಿನನ್ವಯ ಸಂಗ್ರಹಿಸುವುದು.
6. ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2025-26ನೇ ಸಾಲಿನಿಂದ ಮುಂದಿನ ಐದು(5) ವರ್ಷದವರೆಗೆ ಪರಿಗಣಿಸತಕ್ಕದ್ದು.
7. ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದು ಹಾಗೂ ಅದೇ ಅವಧಿಗೆ ಟೆಂಡರ್ ಆಹ್ವಾನಿಸಿ, KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.
8. ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ:2215-O&M ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಚೇತನಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಸೇವೆಗಳು-ಎ ಮತ್ತು ಸ್ವೀಮರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಇಲಾಖೆ

PR-185

ಕರ್ನಾಟಕಸರ್ಕಾರದನಡವಳಿಗಳು

ವಿಷಯ: ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಕೆರವಾಡಿ ಮತ್ತು ಇತರೆ 14 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಪೀಠಿಕೆ:

ಮೇಲೆ ಓದಲಾದ ಏಕಕಡತದಲ್ಲಿ ಉತ್ತರಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ, ಕೆರವಾಡಿ ಮತ್ತು ಇತರೆ 14 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯನ್ನು 2026-27ನೇ ಸಾಲಿನಲೆಕ್ಕ ಶೀರ್ಷಿಕೆ 2215-ಕ್ರಿಯಾ ಯೋಜನೆಯಲ್ಲಿ ಪರಿಗಣಿಸಿ, ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದರೂ.543.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲು ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕ ನೀತಿಯನ್ವಯ, ನಿಯಮಾನುಸಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರಕನ್ನಡ (ಕಾರವಾರ) ಹಾಗೂ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 2215-O&M ಕಾರ್ಯಕ್ರಮದಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಗ್ರಾಅಪ 133 ಆರ್‌ಐ 2026,
ಬೆಂಗಳೂರು, ದಿನಾಂಕ: 15.05.2026

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಉತ್ತರಕನ್ನಡಜಿಲ್ಲೆಯ ಕಾರವಾರ ತಾಲ್ಲೂಕಿನ ಕೆರವಾಡಿ ಮತ್ತು ಇತರೆ 14 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯ ಅಂದಾಜು ಮೊತ್ತ **ರೂ.543.00ಲಕ್ಷ (ಐದುನೂರ ನಲವತ್ತೂರು ಲಕ್ಷ ರೂಪಾಯಿಗಳು ಮಾತ್ರ)**ಗಳಿಗೆ ಲೆಕ್ಕಶೀರ್ಷಿಕೆ 2215-O&M ಕಾರ್ಯಕ್ರಮದ ಅಡಿಯಲ್ಲಿ ಕೆಳಕಂಡಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ನಿರ್ವಹಣೆಯ ಗುತ್ತಿಗೆಯನ್ನು ವಹಿಸಲಾಗುವ ಸಂಸ್ಥೆಯೇ ಐದು (5) ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ನಿರ್ವಹಿಸತಕ್ಕದ್ದು.
2. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.
3. ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆವಿಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು IMIS ನಲ್ಲಿ ದಾಖಲಿಸತಕ್ಕದ್ದು.
4. ಸದರಿ ಯೋಜನೆಯ O&M ಕಾಮಗಾರಿಯನ್ನು 2026-27ನೇ ಸಾಲಿನ ಲೆಕ್ಕಶೀರ್ಷಿಕೆ 2215-MVS (O&M) ಕ್ರಿಯಾ ಯೋಜನೆಯಲ್ಲಿ ಪರಿಗಣಿಸಿ, ಅನುಮೋದನೆ ಪಡೆಯತಕ್ಕದ್ದು.

5. ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್‌ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್‌ರಾವಿನನ್ವಯ ಸಂಗ್ರಹಿಸುವುದು.
6. ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2026-27ನೇ ಸಾಲಿನಿಂದ ಮುಂದಿನ ಐದು(5) ವರ್ಷದವರೆಗೆ ಪರಿಗಣಿಸತಕ್ಕದ್ದು.
7. ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದು ಹಾಗೂ ಅದೇ ಅವಧಿಗೆ ಟೆಂಡರ್ ಅಹ್ವಾನಿಸಿ, KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.
8. ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ:2215-O&M ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಚೇತನಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಸೇವೆಗಳು-ಎಮತ್ತುಸ್ವೀಮರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

PR-186

ಕರ್ನಾಟಕಸರ್ಕಾರದನಡವಳಿಗಳು

ವಿಷಯ: ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನ ಕಮಠಾಣ ಮತ್ತು ಇತರೆ17 ಗ್ರಾಮಗಳಬಹು ಗ್ರಾಮಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ ಕಡತ ಸಂಖ್ಯೆ: RDWSD-TECHOMISC/58/2026

ಪ್ರಸ್ತಾವನೆ:

ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನ ಕಮಠಾಣ ಮತ್ತು ಇತರೆ17 ಗ್ರಾಮಗಳ ಬಹುಗ್ರಾಮಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯನ್ನು 2026-27ನೇ ಸಾಲಿನ ಲೆಕ್ಕಶೀರ್ಷಿಕೆ 2215-ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದ ರೂ.825.50 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಲು ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಕೋರಿರುತ್ತಾರೆ.

ಚಾಲ್ತಿಪಾರದರ್ಶಕ ನೀತಿಯನ್ವಯ, ನಿಯಮಾನುಸಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಬೀದರ್ ಹಾಗೂ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಮುಂದಿನ

ಪ್ರಕ್ರಿಯೆಯನ್ನುಅನುಸರಿಸಲುಅನುವಾಗುವಂತೆ ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 2215-O&Mಕಾರ್ಯಕ್ರಮದ ಅಡಿಯಲ್ಲಿಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 135 ಆರ್‌ಐ 2026,

ಬೆಂಗಳೂರು, ದಿನಾಂಕ: 18.05.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನಕ ಮಠಾಣ ಮತ್ತು ಇತರೆ 17 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಕಾಮಗಾರಿಯ ಅಂದಾಜು ಮೊತ್ತ **ರೂ.825.50 ಲಕ್ಷ(ಎಂಟು ನೂರ ಇಪ್ಪತ್ತೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)** ಗಳಿಗೆ ಲೆಕ್ಕಶೀರ್ಷಿಕೆ 2215-O&M ಕಾರ್ಯಕ್ರಮದ ಅಡಿಯಲ್ಲಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ನಿರ್ವಹಣೆಯ ಗುತ್ತಿಗೆಯನ್ನು ವಹಿಸಲಾಗುವ ಸಂಸ್ಥೆಯೇ ಐದು(5) ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ನಿರ್ವಹಿಸತಕ್ಕದ್ದು.
2. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಪ್ರಧಾನ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.
3. ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆವಿಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು IMIS ನಲ್ಲಿ ದಾಖಲಿಸತಕ್ಕದ್ದು.
4. ಸದರಿ ಯೋಜನೆಯ O&M ಕಾಮಗಾರಿಯನ್ನು 2026-27ನೇ ಸಾಲಿನ 2215-MVS (O&M) ಕ್ರಿಯಾಯೋಜನೆಯಲ್ಲಿ ಪರಿಗಣಿಸಿ, ಅನುಮೋದನೆಪಡೆಯತಕ್ಕದ್ದು.
5. ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಯಾನ್ಯಂಡ್ ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್‌ರಾವಿನನ್ವಯ ಸಂಗ್ರಹಿಸುವುದು.
6. ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2026-27ನೇ ಸಾಲಿನಿಂದ ಮುಂದಿನ ಐದು(5) ವರ್ಷದವರೆಗೆ ಪರಿಗಣಿಸತಕ್ಕದ್ದು.
7. ಐದು(5) ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದು ಹಾಗೂ ಅದೇ ಅವಧಿಗೆ ಟೆಂಡರ್ ಆಹ್ವಾನಿಸಿ, KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.
8. ಕಾರ್ಯಾಚರಣೆ ಮತ್ತು ನಿರ್ವಹಣೆಕಾಮಗಾರಿಯ ವೆಚ್ಚವನ್ನು ಲೆಕ್ಕಶೀರ್ಷಿಕೆ:2215-O&M ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ

(ಚೇತನಎಂ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
(ಸೇವೆಗಳು-ಎ & ಸ್ವೀಮರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

PR-187

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೇಸಿಗೆ ಕಾಲದಲ್ಲಿ ತಾಪಮಾನ ಹೆಚ್ಚಾಗಿರುವುದರಿಂದ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುವನೊಂದಾಯಿತ ಕಾರ್ಮಿಕರಿಗೆ ದುಡಿಯುವ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 71 ಸ್ವೀಮರ 2026, ಬೆಂಗಳೂರು, ದಿನಾಂಕ: 31.03.2026 ರಲ್ಲಿ ಆದೇಶಿಸಲಾಗಿದೆ.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 33 ಆರ್.ಐ.2025 ಬೆಂಗಳೂರು : ದಿನಾಂಕ: 04.04.2025

ಪ್ರಸ್ತಾವನೆ:-

ಪ್ರಸ್ತುತ ಬೇಸಿಗೆಯಲ್ಲಿ ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉಷ್ಣಾಂಶದ ಪ್ರಖರತೆ ಹೆಚ್ಚಾಗಿದ್ದು ಉಲ್ಲೇಖ-1 ರಲ್ಲಿ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸರ್ಕಾರಿ ಕಛೇರಿಗಳ ವೇಳಾಪಟ್ಟಿಯನ್ನು ಬೆಳಿಗ್ಗೆ 08.00 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಯವರೆಗೆ ಬದಲಾಯಿಸಿ ಆದೇಶಿಸಲಾಗಿದೆ. ಬಿಸಿಲಿನ ತಾಪ ಮತ್ತು ಉಷ್ಣಾಂಶದ ಪ್ರಖರತೆ ಹೆಚ್ಚಾಗುತ್ತಿರುವುದರಿಂದ ನರೇಗಾ ಯೋಜನೆಯಡಿ ನಿಗದಿಪಡಿಸಿದ ಕಾಮಗಾರಿಗಳ ಕೆಲಸದ ಪ್ರಮಾಣವನ್ನು ಈ ವಿಭಾಗಗಳಲ್ಲಿ ನಿರ್ವಹಿಸುತ್ತಿರುವುದು ಕಷ್ಟಸಾಧ್ಯವಾಗುತ್ತಿದೆ. ಹಿಂದಿನ ವರ್ಷಗಳ ಬೇಸಿಗೆ ಅವಧಿಯಲ್ಲಿ ಉಲ್ಲೇಖ 2ರಲ್ಲಿ ಸರ್ಕಾರಿ ಆದೇಶಗಳಲ್ಲಿ ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳ ವಿಭಾಗದ ಗ್ರಾಮೀಣ ಪ್ರದೇಶಗಳಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಬೇಸಿಗೆ ಕಾಲದ ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ರಿಯಾಯಿತಿಯನ್ನು ನೀಡಿ ಆದೇಶಗಳನ್ನು ಹೊರಡಿಸಲಾಗಿತ್ತು. ಅದರಂತೆ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳಿಗೆ ನಿಗಧಿಪಡಿಸಿರುವ ಕೆಲಸದ ಪ್ರಮಾಣದಲ್ಲಿ ರಿಯಾಯಿತಿಯನ್ನು ಪ್ರಸ್ತುತ ಬೇಸಿಗೆ ಕಾಲದ ಅವಧಿಗೆ ಅಂದರೆ ಮೇ ಮಾಹೆಯಲ್ಲಿ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ನೀಡಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಅದ್ದರಿಂದ ಈ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 137 ಆರ್ಐ 2026,
ಬೆಂಗಳೂರು ದಿನಾಂಕ: 18.05.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ 2026-27ನೇಸಾಲಿನ ಬೇಸಿಗೆಕಾಲದ ಅವಧಿಯಲ್ಲಿ ಬಿಸಿಲಿನ ತಾಪಮಾನ ಮತ್ತು ಉಷ್ಣಾಂಶದ ಪ್ರಖರತೆ ಹೆಚ್ಚಾಗುತ್ತಿರುವುದರಿಂದ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರ್ಮಿಕರಿಗೆ ನಿಗಧಿಪಡಿಸಿದ ಕೆಲಸದ ಪ್ರಮಾಣದಲ್ಲಿ ಈ ಕೆಳಕಂಡ ಕೋಷ್ಠಕದಲ್ಲಿರುವಂತೆ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಕೆಲಸದ ಪ್ರಮಾಣದ ರಿಯಾಯಿತಿಯನ್ನು ನೀಡಿ ಸರ್ಕಾರವು ಆದೇಶಿಸಿದೆ.

ಬೇಸಿಗೆ ಕಾಲದ ಅವಧಿ	**ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ನೀಡುವ ಶೇಕಡಾ ರಿಯಾಯಿತಿ**
ಮೇ 2026	ಶೇಕಡಾ 30 ರಷ್ಟು

2024-25ನೇ ಸಾಲಿನ ವಾರ್ಷಿಕ ಪ್ರಧಾನ ಸುತ್ತೋಲೆಯ ಅಧ್ಯಾಯ-8ರನ್ವಯ ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಕೂಲಿಕಾರ್ಮಿಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ನೆರಳು, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತು ಮುಂತಾದ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ಕಲ್ಪಿಸುವುದು.

ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿರುತ್ತದೆ. ಈ ಸಂಬಂಧ ಮೇಲೆ ತಿಳಿಸಿರುವ ಜಿಲ್ಲೆಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಚೇತನಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು-ಎ ಮತ್ತು ಸ್ವೀಮರ)

PR-188

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH